# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರು ರವರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು – 560 002.**

ಸಂಖ್ಯೆ: ಹೆನಿನಯೋ/ಪಿಆರ್/1084/2018-19 ದಿನಾಂಕ: 19/03/2019

## ಕಛೇರಿ ಆದೇಶ

ವಿಷಯ:- ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವಾಗ ಕೆರೆ ಮತ್ತು ರಾಜಕಾಲುವೆಗಳಿಗೆ ಬಫರ್ ಕಾಯ್ದಿರಿಸುವ ಕುರಿತು.

ಉಲ್ಲೇಖ:-1. ಘನ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಫೀಲ್ ಸಂಖ್ಯೆ. 5016/2017, 4923-4924/2017 ಮತ್ತು ಇತರೆ ಸಿವಿಲ್ ಅಫೀಲ್‌ಗಳಿಗೆ ಸಂಬಂಧಪಟ್ಟಂತೆ ನೀಡಿರುವ ಆದೇಶ ದಿನಾಂಕ: 05-03-2019.

2. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠವು ಮೂಲ ಅರ್ಜಿ ಸಂಖ್ಯೆ. 222/2014, ಕ್ಕೆ ನೀಡಿರುವ ಆದೇಶ ದಿನಾಂಕ: 04-05-2016.

**********

ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠವು ಮೂಲ ಅರ್ಜಿ ಸಂಖ್ಯೆ. 222/2014 ಕ್ಕೆ ಸಂಬಂಧಪಟ್ಟಂತೆ ನೀಡಲಾದ ದಿನಾಂಕ: 04-05-2016 ರ ಆದೇಶದಲ್ಲಿನ ಸಾಮಾನ್ಯ ಷರತ್ತು ಮತ್ತು ನಿರ್ದೇಶನ ಸಂಖ್ಯೆ. (1) ನ್ನು ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಲ್ ಅಫೀಲ್ ಸಂಖ್ಯೆ. 5016/2016, ರಾಜ್ಯ ಸರ್ಕಾರದಿಂದ ಸಲ್ಲಿಸಲಾದ ಸಿವಿಲ್ ಅಫೀಲ್ ಸಂಖ್ಯೆ. 4923-4924/2017 ಮತ್ತು ಇತರೆ ಸಿವಿಲ್ ಅಫೀಲ್‌ಗಳಲ್ಲಿ ಪ್ರಶ್ನಿಸಲಾಗಿರುತ್ತದೆ. ಘನ ಸರ್ವೋಚ್ಚ ನ್ಯಾಯಾಲಯವು ಸದರಿ ಸಿವಿಲ್ ಅಫೀಲ್‌ಗಳಿಗೆ ಸಂಬಂಧಿಸಿದಂತೆ ದಿನಾಂಕ: 05-03-2019 ರಂದು ನೀಡಿರುವ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ.

" 62. In the light of the above discussion, we pass the following order:

i) Civil Appeal No. 5016 of 2016 and Civil Appeal Nos. 8002-8003 of 2016 filed by the appellants/respondent nos. 9 and 10 are hereby dismissed. The impugned judgment and order in so far as appellants/respondent Nos. 9 and 10 are concerned is sustained.

ii) All the other appeals are hereby allowed and the direction/condition No. (1) in the order dated 4.5.2016 is hereby set aside except the direction issued against respondent Nos. 9 and 10"

ಮೂಲ ಅರ್ಜಿ ಸಂಖ್ಯೆ. 222/2014, (Forward Foundation & Ors Vs State of Karnataka & Ors.) ದಿನಾಂಕ: 04-05-2016 ರ ಎನ್.ಜಿ.ಟಿ ಆದೇಶದ General Conditions or directions; ಕ್ರಮಸಂಖ್ಯೆ. 1 ರಲ್ಲಿ ಕೆರೆ ಮತ್ತು ರಾಜಕಾಲುವೆಗಳಿಗೆ ವಲಯ ನಿಯಮಾವಳಿಗಳಲ್ಲಿ ನಿಗಧಿಪಡಿಸಲಾಗಿದ್ದ ಕೆರೆ ಮತ್ತು ರಾಜಕಾಲುವೆಗಳ ಬಫರ್‌ನ್ನು ಮರುನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

ಘನ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಫೀಲ್ ಸಂಖ್ಯೆ. 5016/2016 ಮತ್ತು ಇತರೆ ಸಿವಿಲ್ ಅಫೀಲ್‌ಗಳ ಸಂಬಂಧ ದಿನಾಂಕ: 05-03-2019 ರಂದು ನೀಡಿರುವ ಆದೇಶದನುಸಾರ ಘನ ಮಾನ್ಯ

ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠವು ಕೆರೆ ಮತ್ತು ರಾಜಕಾಲುವೆಗೆ ಬಫರ್ ನಿಗಧಿಪಡಿಸಿರುವುದನ್ನು set aside ಮಾಡಿರುವುದರಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಬೆಂಗಳೂರು ಮಹಾನಗರ ಪ್ರದೇಶದ ಮಹಾಯೋಜನೆ - 2015 ರ ವಲಯ ನಿಯಮಾವಳಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕೆರೆ ಮತ್ತು ರಾಜಕಾಲುವೆಗಳಿಗೆ ಬಫರ್ ಕಾಯ್ದಿರಿಸಿ ಅಭಿವೃದ್ಧಿಗಳಿಗೆ / ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ನೀಡಬೇಕಾಗಿರುತ್ತದೆ.

ಆದುದರಿಂದ ಇನ್ನು ಮುಂದೆ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವಾಗ ಮತ್ತು ಈಗಾಗಲೇ ಮಂಜೂರಾದ ಕಟ್ಟಡಗಳಿಗೆ ಪರಿಷ್ಕೃತ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವಾಗ ವಲಯ ನಿಯಮಾವಳಿಗಳಲ್ಲಿ ನಿಗಧಿಪಡಿಸಿರುವಂತೆ ಕೆರೆ ಮತ್ತು ರಾಜಕಾಲುವೆಗಳಿಗೆ (ಪ್ರೈಮರಿ, ಸೆಕಂಡರಿ ಮತ್ತು ಟೆರಿಷರಿ ವರ್ಗ) ಬಫರ್ ಕಾಯ್ದಿರಿಸಿ, ಕಟ್ಟಡ ನಿರ್ಮಾಣ / ಅಭಿವೃದ್ಧಿಗಳನ್ನು ನಿಯಮಾನುಸಾರ ಪರಿಶೀಲಿಸಿಕೊಂಡು ಅಗತ್ಯ ಪರವಾನಗಿ / ಪ್ರಾರಂಭಿಕ ಪ್ರಮಾಣಪತ್ರ / ಸ್ವಾಧೀನಾನುಭವ ಪ್ರಮಾಣಪತ್ರ ನೀಡಲು ಸೂಚಿಸಿದೆ.

ಲಗತ್ತು: ಸರ್ಕಾರದ ಪತ್ರ ಸಂಖ್ಯೆ:ನಅಇ 536 ಬೆಂಭೂಸ್ವಾ 2017, ದಿನಾಂಕ: 16-03-2019.

ಆಯುಕ್ತರು 19/3/19
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.</u>**

1) ವಿಶೇಷ ಆಯುಕ್ತರು (ಯೋಜನೆಗಳು) ರವರಿಗೆ
2) ಹೆಚ್ಚುವರಿ ಆಯುಕ್ತರು (ಆಡಳಿತ) ರವರಿಗೆ
3) ವಿಶೇಷ ಆಯುಕ್ತರು (ಹಣಕಾಸು) ರವರಿಗೆ
4) ಕಾನೂನು ಕೋಶದ ಮುಖ್ಯಸ್ಥರು ರವರಿಗೆ
5) ಅಪರ / ಜಂಟಿ ಆಯುಕ್ತರು - ಪೂರ್ವ ವಲಯ / ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪುರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ಬೊಮ್ಮನಹಳ್ಳಿ ವಲಯ / ರಾಜರಾಜೇಶ್ವರಿ ನಗರ ವಲಯ ರವರುಗಳಿಗೆ
6) ಪ್ರಧಾನ ಅಭಿಯಂತರರು ರವರಿಗೆ
7) ಅಪರ ನಿರ್ದೇಶಕರು (ನಗರ ಯೋಜನೆ) ರವರಿಗೆ
8) ಮುಖ್ಯ ಅಭಿಯಂತರರು - ಕೆರೆಗಳು / ಮಳೆ ನೀರುಗಾಲುವೆ / ರಸ್ತೆ ಮೂಲಭೂತ ಸೌಕರ್ಯ ರವರಿಗೆ
9) ಮುಖ್ಯ ಅಭಿಯಂತರರು - ಪೂರ್ವ / ಪಶ್ಚಿಮ / ದಕ್ಷಿಣ / ಮಹದೇವಪುರ / ಯಲಹಂಕ / ದಾಸರಹಳ್ಳಿ / ಬೊಮ್ಮನಹಳ್ಳಿ / ರಾಜರಾಜೇಶ್ವರಿ ನಗರ ವಲಯ ರವರುಗಳಿಗೆ
10) ಜಂಟಿ ನಿರ್ದೇಶಕರು, ನಗರ ಯೋಜನೆ - ಉತ್ತರ / ದಕ್ಷಿಣ / ಸ್ಕ್ವಾಡ್) ರವರಿಗೆ
11) ಜಂಟಿ ಆಯುಕ್ತರು (ಕಂದಾಯ) ರವರಿಗೆ
12) ಸಹಾಯಕ ನಿರ್ದೇಶಕರು - ನಗರ ಯೋಜನೆ - ಪೂರ್ವ / ಪಶ್ಚಿಮ / ದಕ್ಷಿಣ / ಮಹದೇವಪುರ / ಯಲಹಂಕ / ದಾಸರಹಳ್ಳಿ / ಬೊಮ್ಮನಹಳ್ಳಿ / ರಾಜರಾಜೇಶ್ವರಿ ನಗರ ವಲಯ ರವರುಗಳಿಗೆ
13) ಎಲ್ಲಾ ಉಪ ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳಿಗೆ
14) ಸಲಹೆಗಾರರು, ಮಾಹಿತಿ ತಂತ್ರಜ್ಞಾನ ರವರಿಗೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು ಕಳುಹಿಸಿದೆ.
15) ಕಛೇರಿ ಕಡತಕ್ಕೆ